ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2176
ಸದಸ್ಯರ ಹೆಸರು	:	ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	25.03.2021
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಡಾ.ಡಿ.ಎಂ.ನಂಜುಂಡಪ್ಪನವರ ವರದಿ ಅನುಷ್ಠಾನ ಅವಧಿ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಡಾ.ಡಿ.ಎಂ.ನಂಜುಂಡಪ್ಪನವರ ವರದಿ ಅನುಷ್ಠಾನದಿಂದ ರಾಜ್ಯದಲ್ಲಿ ಆಗಿರುವ ಪ್ರಾದೇಶಿಕ ಅಸಮಾನತೆಯ ಬದಲಾವಣೆಗಳೇನು;	–ಹೌದು– ಡಾ.ಡಿ.ಎಂ.ನಂಜುಂಡಪ್ಪನವರ ವರದಿಯ ಅನುಷ್ಠಾನವು **2007–08** ರಿಂದ **8** ವರ್ಷದ ಅವಧಿಗೆ ಅಂದರೆ, **2014–15**ಕ್ಕೆ ಪೂರ್ಣಗೊಂಡ ಕಾರಣ ಬೆಳಗಾವಿ ಅಧಿವೇಶನದಲ್ಲಿ ದಿನಾಂಕ:15.07.2015ರಂದು ನಿರ್ಣಯ ಕೈಗೊಂಡು ಮತ್ತೆ 5 ವರ್ಷಗಳವರೆಗೆ **2019–20**ನೇ ಸಾಲಿನವರೆವಿಗೆ ಮುಂದುವರಿಸಲಾಯಿತು. ತದನಂತರ ಆಯವ್ಯಯದಲ್ಲಿ ಪ್ರತಿ ವರ್ಷ ರೂ.**3000** ಕೋಟಿಗಳನ್ನ ನೀಡಿ, ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಲು ಯೋಜನೆಯನ್ನು ಮುಂದುವರಿಸಲಾಗಿರುತ್ತದೆ. ನಂಜುಂಡಪ್ಪ ವರದಿಯನ್ವಯ ರೂ.31000.00 ಕೋಟಿಗಳನ್ನು ಹಿಂದುಳಿದ ತಾಲ್ಲೂಕುಗಳಿಗೆ ಹೂಡಿಕೆ ಮಾಡಲು ಶಿಫಾರಸ್ಸು ಮಾಡಿದ್ದು, ಇದರಲ್ಲಿ ರೂ.15000.00 ಕೋಟಿಗಳು ಸಾಮಾನ್ಯ ಯೋಜನೆಗೆ ರೂ.16000.00 ಕೋಟಿಗಳು ವಿಶೇಷ ಅಭಿವೃದ್ಧಿ ಯೋಜನೆಗೆ ನಿಗದಿ ಪಡಿಸಬೇಕಾಗಿದ್ದು, 2020–21ನೇ ಸಾಲಿನವರೆಗೆ ರೂ.35821.00 ಕೋಟಿಗಳನ್ನು ನಿಗದಿ ಪಡಿಸಿ ರೂ.27927.00 ಕೋಟಿಗಳನ್ನು ಬಿಡುಗಡೆ ಮಾಡಿ ರೂ.27341.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಸರ್ಕಾರದ ನಿರ್ದೇಶನದಂತೆ, ಅಭಿವೃದ್ಧಿಯಾಗಿರುವ ಬಗ್ಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಡಾ.ಡಿ.ಎಂ.ನಂಜುಂಡಪ್ಪನವರ ವರದಿಯ 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿ ಸೂಚ್ಯಾಂಕಗಳ ಬಗ್ಗೆ 2017–18ನೇ ಸಾಲಿನಲ್ಲಿ ಪರಿಶೀಲನೆ ಕೈಗೊಂಡು ಫೆಬ್ರವರಿ–2018ರಲ್ಲಿ ವರದಿ ನೀಡಿದ್ದು, ಸದರಿ ವರದಿಯಂತೆ ಅಭಿವೃದ್ಧಿ ಹೊಂದಿರುವ ತಾಲ್ಲೂಕುಗಳು ಈ ಕೆಳಕಂಡಂತೆ ಇವೆ. • 114 ತಾಲ್ಲೂಕುಗಳಲ್ಲಿ 18 ತಾಲ್ಲೂಕುಗಳು ಅಭಿವೃದ್ಧಿ ಹೊಂದಿರುತ್ತವೆ. ಅಭಿವೃದ್ಧಿಯ ಪ್ರಮಾಣ ಶೇಕಡ 15.78ರಷ್ಟು ಅಗಿರುತ್ತದೆ. • ಅತ್ಯಂತ ಹಿಂದುಳಿದ 39 ತಾಲ್ಲೂಕುಗಳ ಪೈಕಿ ಪ್ರಸ್ತುತ 29 ತಾಲ್ಲೂಕುಗಳು ಅತ್ಯಂತ ಹಿಂದುಳಿದ ವರ್ಗದಲ್ಲಿ ಇದ್ದು, ಉಳಿದ 10 ತಾಲ್ಲೂಕು ಅಭಿವೃದ್ಧಿ ಹೊಂದಿರುತ್ತವೆ. ಅಭಿವೃದ್ಧಿಯ ಪ್ರಮಾಣ ಶೇಕಡ 25.64ರಷ್ಟು ಅಗಿರುತ್ತದೆ. • ಅತಿ ಹಿಂದುಳಿದ 40 ತಾಲ್ಲೂಕುಗಳ ಪೈಕಿ ಪ್ರಸ್ತುತ 24 ತಾಲ್ಲೂಕುಗಳಿದ್ದು, ಉಳಿದ 16 ತಾಲ್ಲೂಕುಗಳು ಅತಿ ಹಿಂದುಳಿದ ವರ್ಗದಿಂದ ಬದಲಾವಣೆ ಹೊಂದಿರುತ್ತವೆ. ಅಭಿವೃದ್ಧಿಯ ಪ್ರಮಾಣ ಶೇಕಡ 40ರಷ್ಟು ಅಗಿರುತ್ತದೆ.

ಕ್ರ ಸಂ.	ಪ್ರಶ್ನೆ	ಉತ್ತರ
		• ಹಿಂದುಳಿದ 35 ತಾಲ್ಲೂಕುಗಳ ಬದಲಾಗಿ ಪ್ರಸ್ತುತ 43 ತಾಲ್ಲೂಕುಗಳು ಸದರಿ ವರ್ಗದಲ್ಲಿ ಇರುತ್ತವೆ. ಅಂದರೆ 7 ತಾಲ್ಲೂಕುಗಳು ಈ ಗುಂಪಿಗೆ ಅತ್ಯಂತ ಹಿಂದುಳಿದ/ಅತೀ ಹಿಂದುಳಿದ ವರ್ಗದಿಂದ ಹಿಂದುಳಿದ ತಾಲ್ಲೂಕಿಗೆ ಸೇರ್ಪಡೆಯಾಗಿರುವುದು ಸಹ ಅಭಿವೃದ್ಧಿಯಾಗಿದೆ ಎಂಬುದರ ಪ್ರತೀಕವಾಗಿದೆ. • ನಂಜುಂಡಪ್ಪ ವರದಿಯನ್ವಯ ಅಭಿವೃದ್ಧಿ ಹೊಂದಿರುವ ತಾಲ್ಲೂಕು 61 ಇದ್ದು, ಪ್ರಸ್ತುತ 80 ತಾಲ್ಲೂಕುಗಳು ಅಭಿವೃದ್ಧಿ ಹೊಂದಿರುತ್ತವೆ. ಒಟ್ಟು 19 ತಾಲ್ಲೂಕುಗಳು (ಒಂದು ಹೊಸ ತಾಲ್ಲೂಕು ಕಿತ್ತೂರು ಸೇರಿದಂತೆ) ಅಭಿವೃದ್ಧಿ ಹೊಂದಿರುತ್ತವೆ.
ಆ)	ಸದರಿ ವರದಿ ಅನುಷ್ಠಾನದಿಂದ ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆ ಸರಿಯಾಗಿದೆಯೇ; ಇಲ್ಲದಿದ್ದಲ್ಲಿ, ಸರ್ಕಾರ ಡಾ.ಡಿ.ಎಂ. ನಂಜುಂಡಪ್ಪನವರ ವರದಿ ಅನುಷ್ಠಾನವನ್ನು ಮುಂದುವರಸಲು ಕೈಗೊಂಡಿರುವ ಕ್ರಮವೇನು;	ನಂಜುಂಡಪ್ಪ ವರದಿ ಅನುಷ್ಠಾನದಿಂದ ಪ್ರಾದೇಶಿಕ ಅಸಮಾನತೆ ಬಾಗಶಃ ಸರಿಯಾಗಿದೆ. ರಾಜ್ಯದ 114 ಹಿಂದುಳಿದ ತಾಲ್ಲೂಕುಗಳಲ್ಲಿ 18 ತಾಲ್ಲೂಕುಗಳು ಮುಂದುವರೆದ ತಾಲ್ಲೂಕುಗಳಾಗಿ ಅಭಿವೃದ್ಧಿ ಹೊಂದಿದ್ದು, ಅತ್ಯಂತ ಹಿಂದುಳಿದ ತಾಲ್ಲೂಕುಗಳ ಪ್ರಗತಿಯ ಪ್ರಮಾಣ ಶೇಕಡವಾರು 15.78ರಷ್ಟು, ಅತಿ ಹಿಂದುಳಿದ ತಾಲ್ಲೂಕುಗಳ ಪ್ರಗತಿಯ ಪ್ರಮಾಣ ಶೇಕಡವಾರು 40ರಷ್ಟು ಹಾಗೂ ಹಿಂದುಳಿದ ತಾಲ್ಲೂಕುಗಳು ಸಹ ಅಭಿವೃದ್ಧಿ ಹೊಂದಿರುತ್ತವೆ. ನಂಜುಂಡಪ್ಪ ವರದಿಯು 2007-08ರಿಂದ 8 ವರ್ಷಗಳ ಅವಧಿಗೆ ಮುಂದುವರೆಸಲಾಗಿದ್ದು, ತದನಂತರ ಮತ್ತೆ 5 ವರ್ಷಗಳ ಅವಧಿಗೆ ಬೆಳಗಾವಿ ಅಧಿವೇಶನದಲ್ಲಿ ನಿರ್ಣಯ ಕೈಗೊಂಡು ಮುಂದುವರೆಸಲಾಯಿತು. ನಂತರ ಪ್ರತಿ ವರ್ಷ ಆಯವ್ಯಯದಲ್ಲಿ ರೂ.3000.00 ಕೋಟಿಗಳನ್ನು ನಿಗದಿ ಪಡಿಸಿ ಮುಂದುವರೆಸಿಕೊಂಡು ಬರಲಾಗಿದೆ. 2021-22ನೇ ಸಾಲಿನ ಆಯವ್ಯಯದಲ್ಲೂ ಸಹ ರೂ.3000.00 ಕೋಟಿಗಳನ್ನು ಘೋಷಿಸಿ ಯೋಜನೆಯನ್ನು ಮುಂದುವರೆಸಲಾಗಿದೆ.
ಇ)	ಸದರಿ ವರದಿಯಂತೆ ರಾಜ್ಯದಲ್ಲಿ ವರದಿ ಅನುಷ್ಠಾನದಿಂದ ಎಷ್ಟು ಹಿಂದುಳಿದ ತಾಲ್ಲೂಕುಗಳು ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಾಗಿ ಬದಲಾವಣೆಯಾಗಿವೆ;	ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಡಾ.ಡಿ.ಎಂ.ನಂಜುಂಡಪ್ಪನವರ ವರದಿಯ 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿ ಸೂಚ್ಯಾಂಕಗಳ ಬಗ್ಗೆ 2017-18ನೇ ಸಾಲಿನಲ್ಲಿ ಪರಿಶೀಲನೆ ಕೈಗೊಂಡು ಫೆಬ್ರವರಿ-2018ರಲ್ಲಿ ವರದಿ ಸೀಡಿದ್ದು, ಸದರಿ ವರದಿಯಂತೆ 18 ತಾಲ್ಲೂಕುಗಳು ಮುಂದುವರೆದಿದ್ದು, 96 ತಾಲ್ಲೂಕುಗಳು ಹಿಂದುಳಿದಿರುವುದು ಕಂಡು ಬಂದಿದೆ. ವಿವರ ಈ ಕೆಳಕಂಡಂತೆ ಇರುತ್ತದೆ.

ತಾಲ್ಲೂಕು	ಕಾಂಪ್ರಿಹೆನ್ಸಿವ್ ಕಂಪೋಸಿಟ್ ಡೆವಲಪಮೆಂಟ್ ಇಂಡೆಕ್ಸ್(CCDI)	ಪ್ರಾ.ಅ.ನಿ.ಉ. ಸಮಿತಿಯ ಪ್ರಕಾರ ತಾಲ್ಲೂಕುಗಳು	ಕಾಂಪ್ರಿಹೆನ್ಸಿವ್ ಕಂಪೋಸಿಟ್ ಡೆವಲಪಮೆಂಟ್ ಇಂಡೆಕ್ಸ್(CCDI) ಪ್ರಕಾರ ಪ್ರಸ್ತುತ ತಾಲ್ಲೂಕುಗಳ ಅಂದಾಜು
ಅತ್ಯಂತ ಹಿಂದುಳಿದ	0.52-0.79	39	29
ಅತೀ ಹಿಂದುಳಿದ	0.80-0.88	40	24
ಹಿಂದುಳಿದ	0.89-0.99	35	43

ಕ್ರ. ಸಂ.	ಪ್ರಶ್ನೆ	ಉತ್ತರ

ಒಟ್ಟು		**114**	**96**
ಅಭಿವೃದ್ಧಿ ತಾಲ್ಲೂಕುಗಳು	1.0 & ಸೂಚ್ಯಾಂಕ ಮೀರಿ	61	80
ಒಟ್ಟು (2015-16ನೇ ಸಾಲಿನ ಅಂಕಿ ಅಂಶಗಳ ಆಧಾರದ ಮೇಲೆ)		175	176 *ಕಿತ್ತೂರು ತಾಲ್ಲೂಕು ಸೃಜಿಸಲಾಗಿದೆ.

ಕ್ರ. ಸಂ.	ಪ್ರಶ್ನೆ	ಉತ್ತರ
ಈ)	ರಾಜ್ಯದಲ್ಲಿ ಡಾ.ಡಿ.ಎಂ.ನಂಜುಂಡಪ್ಪನವರ ಉನ್ನತಾಧಿಕಾರಿ ಸಮಿತಿಯ ರೀತಿ ಮೊತ್ತೊಮ್ಮೆ ಪ್ರಾದೇಶಿಕ ಅಸಮಾನತೆ ಅಧ್ಯಯನ ಮಾಡಲು ಉನ್ನತಾಧಿಕಾರಿ ಸಮಿತಿ ರಚಿಸಲು ಸರ್ಕಾರ ಯೋಚಿಸಿದೆಯೇ; ಮತ್ತೊಂದು ಸಮಿತಿ ರಚಿಸಲು ಸರ್ಕಾರಕ್ಕೆ ಇರುವ ತೊಡಕುಗಳೇನು;	ಹೌದು, ಪರಿಶೀಲನೆಯಲ್ಲಿ ಇದೆ.
ಉ)	ಸದರಿ ವರದಿ ಅನುಷ್ಠಾನವನ್ನು 2007-08ರಿಂದ ಇಲ್ಲಿಯವರೆಗೆ ಮಾಡಲಾಗುತ್ತಿದ್ದು, ವಿಶೇಷ ಅಭಿವೃದ್ಧಿ ಯೋಜನೆಯ ಅನುದಾನ ಹಂಚಿಕೆ, ಬಳಕೆ ಮಾಡಲಾಗಿದೆಯೇ? (ತಾಲ್ಲೂಕುವಾರು, ವರ್ಷವಾರು, ಇಲಾಖಾವಾರು ಮಾಹಿತಿ ನೀಡುವುದು)	ಡಾ.ಡಿ.ಎಂ.ನಂಜುಂಡಪ್ಪ ವರದಿಯನ್ವಯ ಕಳೆದ 3 ವರ್ಷಗಳ ತಾಲ್ಲೂಕುವಾರು ವರ್ಷವಾರು ಹಾಗೂ ಇಲಾಖಾವಾರು ಹಂಚಿಕೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಪಿಡಿಎಸ್ 16 ಎಸ್‌ಡಿಪಿ 2021

(ಡಾ॥ ನಾರಾಯಣಗೌಡ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಅನುಬಂಧ–1

ರಾಜ್ಯದ ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಂಜುಂಡಪ್ಪ ಯೋಜನೆಯನ್ವಯ ವಿವಿಧ ಇಲಾಖೆಗಳಡಿ ಮಂಜೂರಾದ ಅನುದಾನ, ಬಿಡುಗಡೆಯಾದ ಹಾಗೂ ಖರ್ಚಾಗಿರುವ ಅನುದಾನದ ವಿವರಗಳು:–

(ರೂ.ಕೋಟಿಗಳಲ್ಲಿ)

ಕ್ರ ಸಂ.	ಇಲಾಖೆ	ಯೋಜನೆ	2018–19			2019–20			2020–21		
			ನಿಗದಿ	ಬಿಡುಗಡೆ	ವೆಚ್ಚ	ನಿಗದಿ	ಬಿಡುಗಡೆ	ವೆಚ್ಚ	ನಿಗದಿ	ಬಿಡುಗಡೆ	ವೆಚ್ಚ
1	ಕೃಷಿ	ಕೃಷಿ ಭಾಗ್ಯ	90.00	90.00	89.75	45.00	45.00	45.00			
		ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ	31.46	31.46	31.26	63.20	63.20	63.20			
2	ತೋಟಗಾರಿಕೆ	ಪಿಎಂಕೆಎಸ್‌ವೈ – ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ	22.71	22.71	22.44	20.37	20.37	20.37			
		ಸಮಗ್ರ ತೋಟಗಾರಿಕಾ ಅಭಿವೃದ್ಧಿ	5.10	5.10	4.69	4.91	4.91	4.91			
		ರಾಷ್ಟ್ರೀಯ ತೋಟಗಾರಿಕಾ ಅಭಿವೃದ್ಧಿ	25.00	25.00	24.48	24.51	24.51	24.51	34.43	35.21	25.09
3	ಒಳಾಡಳಿತ	ಕೆ.ಎಸ್.ಎ.ಎಫ್.ಇ				4.30	1.40	1.40	3.14	6.28	3.14
4	ಸಾರಿಗೆ	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ	62.12	53.00	59.03	56.09	56.09	56.09	23.75	ವಿಶೇಷ ಪ್ರಕರಣವೆಂದು ಪರಿಗಣಿಸಿ ಹಿಂಬರಹ ಸಂಖ್ಯೆ: ಆಇ 171 ವೆಚ್ಚ 11/2020 (ಇ), ದಿನಾಂಕ: 23.07.2020ರಲ್ಲಿ ಸಾರಿಗೆ ಇಲಾಖೆಯ ವ್ಯಾಪ್ತಿಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರ ವೇತನ ವೆಚ್ಚಕ್ಕಾಗಿ 2020–21ನೇ ಸಾಲಿನಲ್ಲಿ ನಿಗದಿಯಾದ ಅನುದಾನವನ್ನು ಬಳಸಿಕೊಳ್ಳಲಾಗಿದೆ.	
		ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ	50.00	50.00	40.20	50.00	50.00	50.00	21.66		
		ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೇ	7.00	7.00	7.00	4.27	4.27	4.27			
		ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ	40.00	40.00	37.60	42.50	42.50	42.50	17.57		
5	ಮೂಲಭೂತ ಸೌಕರ್ಯ ಅಭಿವೃದ್ಧಿ	ರೈಲ್ವೆ ಯೋಜನೆಗಳ ವೆಚ್ಚ ಹಂಚಿಕೆ	87.37	62.12	62.12	35.51	35.51	35.51	24.86	18.66	14.46
6	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್	ಗ್ರಾಮೀಣ ನೀರು ಸರಬರಾಜು ಯೋಜನೆ– ವಿಶೇಷ ಅಭಿವೃದ್ಧಿ ಯೋಜನೆ	391.93	250.02	250.02	502.54	275.03	275.03	363.14	207.07	156.08
		ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ	600.00	229.83	229.83	641.06	458.29	458.29	156.59	152.28	152.28

ಕ್ರ ಸಂ.	ಇಲಾಖೆ	ಯೋಜನೆ	2018-19			2019-20			2020-21		
			ನಿಗದಿ	ಬಿಡುಗಡೆ	ವೆಚ್ಚ	ನಿಗದಿ	ಬಿಡುಗಡೆ	ವೆಚ್ಚ	ನಿಗದಿ	ಬಿಡುಗಡೆ	ವೆಚ್ಚ
		ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಕಾಮಗಾರಿ – ನಬಾರ್ಡ್	66.98	36.89	32.67						
7	ಸಹಕಾರ	ಎ.ಪಿ.ಎಂ.ಸಿ.ಗಳ ವಿಶೇಷ ಯೋಜನೆಗಳಿಗೆ ನೆರವು	7.60	7.60	7.60	5.56	5.56	5.56			
6	ಸಮಾಜ ಕಲ್ಯಾಣ/ಅಲ್ಪ ಸಂಖ್ಯಾತರ ಕಲ್ಯಾಣ	ಅಲ್ಪಸಂಖ್ಯಾತರಿಗಾಗಿ ವಸತಿನಿಲಯ ಮತ್ತು ವಸತಿಶಾಲೆ ಕಟ್ಟಡಗಳ ನಿರ್ಮಾಣ, ಅಲ್ಪಸಂಖ್ಯಾತರ ಕಛೇರಿ ಸಂಕೀರ್ಣಗಳು, ಉರ್ದು ಸಮಾವೇಶ ಮತ್ತು ಸಂಸ್ಕೃತಿಕ ಕೇಂದ್ರ	50.00	50.00	50.00	50.00	50.00	50.00	50.00	21.00	
	ಸಮಾಜ ಕಲ್ಯಾಣ/ಹಿಂದುಳಿದ ವರ್ಗಗಳ ಕಲ್ಯಾಣ	ಹಾಸ್ಟೆಲ್ ಕಟ್ಟಡಗಳ ನಿರ್ಮಾಣ	80.32	80.32	80.32	82.96	82.96	82.96	0.01		
7	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ಅಂಗನವಾಡಿ ಕಟ್ಟಡಗಳು	36.00	36.00	35.98	36.00	35.98	35.98	20.00	16.20	8.90
8	ವಸತಿ	ಆಶ್ರಯ-ಬಸವ ವಸತಿ	194.53	194.53	194.53	180.07	59.42	59.42	150.00	148.54	148.54
9	ಪ್ರಾಥಮಿಕ ಶಿಕ್ಷಣ	ಶಾಲೆಯ ಸೌಲಭ್ಯಗಳ ನಿರ್ವಹಣೆ	6.50	6.50	6.50	6.50	6.50	6.50	7.80	7.80	7.80
		ರಾಜ್ಯ ಉಪಕ್ರಮಗಳಡಿಯಲ್ಲಿ ಸರ್ವಶಿಕ್ಷಣ ಅಭಿಯಾನ ಸಮಾಜ	20.46	20.46	20.46	20.50	15.38	15.38	20.50	5.13	5.13
		ಪದವಿ ಪೂರ್ವ ಪರೀಕ್ಷೆ	7.63	7.63	6.63	11.46	11.44	11.44			
		ಪ್ರೌಢಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಲಭ್ಯ				50.00	50.00	50.00			
10	ಉನ್ನತ ಶಿಕ್ಷಣ	ಪ್ರಥಮ ದರ್ಜೆ ಮಹಾವಿದ್ಯಾಲಯ ಕಟ್ಟಡಗಳು	70.00	70.00	70.00	53.89	53.89	53.89	35.97	8.99	5.89
11	ಲೋಕೋಪಯೋಗಿ	ಜಿಲ್ಲಾ ಮತ್ತು ಇತರೆ ರಸ್ತೆಗಳು	302.67	302.67	260.26	370.70	370.70	370.70	217.85	185.06	137.61
12	ಜಲ ಸಂಪನ್ಮೂಲ	ಕೃಷ್ಣ-ಭಾಗ್ಯ ಜಲ ನಿಗಮ ನಿಯಮಿತ	60.22	55.97	55.97	103.98	87.98	87.98	171.18	114.12	107.38

ಕ್ರ. ಸಂ.	ಇಲಾಖೆ	ಯೋಜನೆ	2018–19			2019–20			2020–21		
			ನಿಗದಿ	ಬಿಡುಗಡೆ	ವೆಚ್ಚ	ನಿಗದಿ	ಬಿಡುಗಡೆ	ವೆಚ್ಚ	ನಿಗದಿ	ಬಿಡುಗಡೆ	ವೆಚ್ಚ
	(ಬೃಹತ್–ಮಧ್ಯಾಮ)	ಕರ್ನಾಟಕ ನೀರಾವರಿ ನಿಗಮ ನಿಯಮಿತ	313.77	554.07	554.07	313.77	313.77	313.77	429.64	408.54	408.54
		ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ	28.00	36.11	36.11	38.08	13.62	13.62	91.78	71.06	71.06
		ಕಾವೇರಿ ನೀರಾವರಿ ನಿಗಮ ನಿಯಮಿತದಿಂದ ನೀರಾವರಿ ಕಾಮಗಾರಿಗಳು							101.17	88.52	49.52
		ಕಾಡಾ–ವಿಶೇಷ ಅಭಿವೃದ್ಧಿ ಕಾರ್ಯಕ್ರಮ	167.19	87.79	87.79	147.19	119.50	119.50	62.30	30.85	29.87
13	ಸಣ್ಣ ನೀರಾವರಿ	ಹೊಸ ಕಾಮಗಾರಿಗಳಿಗೆ ಇಡಿಗಂಟು				111.18	104.55	104.55	35.00	13.28	11.56
14	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	ಕರ್ನಾಟಕ ರಾಜ್ಯ ಡ್ರಗ್, ಲಾಜಿಸ್ಟಿಕ್ ಮತ್ತು ವೇರ್ ಹೌಸಿಂಗ್ ಸೊಸೈಟಿ	3.00	2.70	3.00	2.64	2.64	2.64			
		ರಾಷ್ಟ್ರೀಯ ಆರೋಗ್ಯ ಅಭಿಯಾನ (ರಾ.ಆ.ಅ	79.78	79.78	65.22	79.84	79.84	79.84	45.00	45.00	34.09
		ಆರೋಗ್ಯ ಕರ್ನಾಟಕ	118.43	118.43	118.43	147.07	36.77	36.77			
		ಆಸ್ಪತ್ರೆ ನಿರ್ಮಾಣ / ಉನ್ನತೀಕರಣ	60.32	45.24	45.23	65.00	65.00	65.00	65.05	42.79	20.83
		ಆಯುಶ್ಮಾನ ಭಾರತ – ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ							75.00	75.00	57.93
15	ಕಾರ್ಮಿಕ ಮತ್ತು ಕೌಶಲ್ಯಾಭಿವೃದ್ಧಿ	ವಿಶಿಷ್ಟ ಕೌಶಲ್ಯಾಭಿವೃದ್ಧಿ ಸಂಸ್ಥೆಗಳು	37.22	37.22	32.99	37.22	37.22	37.22	43.13	32.36	32.10
16	ಇಂಧನ	ವಿದ್ಯುಚ್ಛಕ್ತಿ ಬಳಕೆಯಲ್ಲಿ ಹೂಡಿಕೆ	140.13	140.13	140.13	191.37	191.37	191.37	146.78	73.30	42.45
17	ಯೋಜನೆ	ಅನುಚ್ಛೇದ 371ಜೆ – ಹೈದಾರಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ	217.81	217.81	217.81						
	ಒಟ್ಟು		**3481.25**	**3054.09**	**2980.12**	**3599.24**	**2875.17**	**2875.17**	**2413.30**	**1807.04**	**1530.25**

2020–21ನೇ ಸಾಲಿನಲ್ಲಿ ಇಲಾಖೆಗಳ ಯೋಜನೆಗಳಿಗೆ ಮಂಜೂರಾದ ಅನುದಾನ, ಬಿಡುಗಡೆಯಾದ, ಖರ್ಚಾಗಿರುವ ನಿಗದಿಯಾಗಿರುವ ಅನುದಾನದ ವಿವರವು ಪೆಬ್ರವರಿ–2021ರ ವರೆಗೆ ಮಾಹಿತಿ ನೀಡಲಾಗಿದೆ.

ತಾಲ್ಲೂಕುವಾರು ಮಂಜೂರಾದ ಅನುದಾನ, ಬಿಡುಗಡೆಯಾದ, ಖರ್ಚಾಗಿರುವ ಅನುದಾನದ ವಿವರ

(ರೂ.ಕೋಟಿಗಳಲ್ಲಿ)

ಜಿಲ್ಲೆಗಳು	ಕ್ರ ಸಂ.	ತಾಲ್ಲೂಕು ವರ್ಗ	ತಾಲ್ಲೂಕು	2018-19			2019-20		
				ನಿಗದಿ	ಬಿಡುಗಡೆ	ವೆಚ್ಚ	ನಿಗದಿ	ಬಿಡುಗಡೆ	ವೆಚ್ಚ
ಬಳ್ಳಾರಿ	1	ಅತ್ಯಂತ ಹಿಂದುಳಿದ	ಸಂಡೂರು	41.74	36.62	35.73	43.16	34.47	33.42
	2	ಅತ್ಯಂತ ಹಿಂದುಳಿದ	ಕೂಡ್ಲಗಿ	43.41	38.08	37.16	44.88	35.85	34.76
	3	ಅತೀ ಹಿಂದುಳಿದ	ಸಿರಗುಪ್ಪ	23.38	20.51	20.01	24.17	19.31	18.71
	4	ಅತೀ ಹಿಂದುಳಿದ	ಹೆಚ್.ಬಿ.ಹಳ್ಳಿ	26.71	23.44	22.87	27.62	22.06	21.39
	5	ಅತೀ ಹಿಂದುಳಿದ	ಹಡಗಲಿ	31.72	27.83	27.16	32.80	26.20	25.40
	71	ಅತ್ಯಂತ ಹಿಂದುಳಿದ	ಹರಪನಹಳ್ಳಿ	46.75	41.01	40.02	48.34	38.61	37.43
ಬೀದರ್	6	ಅತ್ಯಂತ ಹಿಂದುಳಿದ	ಬಾಲ್ಕಿ	43.41	38.08	37.16	44.88	35.85	34.76
	7	ಅತ್ಯಂತ ಹಿಂದುಳಿದ	ಹುಮ್ನಾಬಾದ್	45.08	39.55	38.59	46.61	37.23	36.09
	8	ಅತ್ಯಂತ ಹಿಂದುಳಿದ	ಬಸವಕಲ್ಯಾಣ	51.76	45.41	44.31	53.51	42.75	41.44
	9	ಅತ್ಯಂತ ಹಿಂದುಳಿದ	ಔರಾದ್	58.44	51.27	50.03	60.42	48.26	46.79
ಯಾದಗೀರ್	10	ಅತ್ಯಂತ ಹಿಂದುಳಿದ	ಶಾಹಪೂರ	63.45	55.66	54.31	65.60	52.40	50.80
	11	ಅತ್ಯಂತ ಹಿಂದುಳಿದ	ಶೂರಪೂರ	50.09	43.94	42.88	51.79	41.37	40.10
	12	ಅತ್ಯಂತ ಹಿಂದುಳಿದ	ಯಾದಗಿರಿ	55.10	48.34	47.17	56.97	45.51	44.11
ಕಲಬುರ್ಗಿ	13	ಅತ್ಯಂತ ಹಿಂದುಳಿದ	ಸೇಡಂ	46.75	41.01	40.02	48.34	38.61	37.43
	14	ಅತ್ಯಂತ ಹಿಂದುಳಿದ	ಚಿತ್ತಾಪುರ	58.44	51.27	50.03	60.42	48.26	46.79
	15	ಅತ್ಯಂತ ಹಿಂದುಳಿದ	ಅಫಜಲ್ ಪುರ	63.45	55.66	54.31	65.60	52.40	50.80
	16	ಅತ್ಯಂತ ಹಿಂದುಳಿದ	ಅಳಂದ	65.12	57.13	55.74	67.32	53.78	52.13
	17	ಅತ್ಯಂತ ಹಿಂದುಳಿದ	ಚಿಂಚೋಳಿ	71.80	62.99	61.46	74.23	59.30	57.48
	18	ಅತ್ಯಂತ ಹಿಂದುಳಿದ	ಜೇವರ್ಗಿ	71.80	62.99	61.46	74.23	59.30	57.48
	19	ಹಿಂದುಳಿದ	ಕಲಬುರ್ಗಿ	18.37	16.11	15.72	18.99	15.17	14.70
ರಾಯಚೂರು	20	ಅತ್ಯಂತ ಹಿಂದುಳಿದ	ಸಿಂಧನೂರು	36.73	32.23	31.44	37.98	30.34	29.41
	21	ಅತ್ಯಂತ ಹಿಂದುಳಿದ	ಮಾನ್ವಿ	51.76	45.41	44.31	53.51	42.75	41.44
	22	ಅತ್ಯಂತ ಹಿಂದುಳಿದ	ಲಿಂಗಸೂರು	61.78	54.20	52.88	63.87	51.02	49.46
	23	ಅತ್ಯಂತ ಹಿಂದುಳಿದ	ದೇವದುರ್ಗ	78.47	68.85	67.18	81.13	64.81	62.83
	24	ಅತೀ ಹಿಂದುಳಿದ	ರಾಯಚೂರು	21.71	19.04	18.58	22.44	17.93	17.38
ಕೊಪ್ಪಳ	25	ಅತ್ಯಂತ ಹಿಂದುಳಿದ	ಕುಷ್ಟಗಿ	60.11	52.73	51.46	62.15	49.64	48.12
	26	ಅತ್ಯಂತ ಹಿಂದುಳಿದ	ಯೆಲಬುರ್ಗ	61.78	54.20	52.88	63.87	51.02	49.46
	27	ಅತೀ ಹಿಂದುಳಿದ	ಕೊಪ್ಪಳ	31.72	27.83	27.16	32.80	26.20	25.40
	28	ಹಿಂದುಳಿದ	ಗಂಗಾವತಿ	11.69	10.25	10.01	12.08	9.65	9.36
ಬೆಳಗಾವಿ	29	ಅತೀ ಹಿಂದುಳಿದ	ಅಥಣಿ	20.28	17.79	17.36	20.97	16.75	16.24
	30	ಅತೀ ಹಿಂದುಳಿದ	ಗೋಕಾಕ್	23.66	20.76	20.25	24.46	19.54	18.94
	31	ಅತೀ ಹಿಂದುಳಿದ	ಸವದತ್ತಿ	23.66	20.76	20.25	24.46	19.54	18.94
	32	ಹಿಂದುಳಿದ	ರಾಯ್ ಬಾಗ್	5.07	4.45	4.34	5.24	4.19	4.06
	33	ಹಿಂದುಳಿದ	ಬೈಲಹೊಂಗಲ	8.45	7.41	7.23	8.74	6.98	6.76
	34	ಹಿಂದುಳಿದ	ರಾಮದುರ್ಗ	16.90	14.83	14.47	17.47	13.96	13.53
	35	ಹಿಂದುಳಿದ	ಹುಕ್ಕೇರಿ	18.59	16.31	15.91	19.22	15.35	14.88
ವಿಜಯಪುರ	36	ಅತ್ಯಂತ ಹಿಂದುಳಿದ	ಮುದ್ದೇಬಿಹಾಳ್	52.39	45.96	44.85	54.16	43.27	41.94

ಜಿಲ್ಲೆಗಳು	ಕ್ರ. ಸಂ.	ತಾಲ್ಲೂಕು ವರ್ಗ	ತಾಲ್ಲೂಕು	2018–19			2019–20		
				ನಿಗದಿ	ಬಿಡುಗಡೆ	ವೆಚ್ಚ	ನಿಗದಿ	ಬಿಡುಗಡೆ	ವೆಚ್ಚ
	37	ಅತ್ಯಂತ ಹಿಂದುಳಿದ	ಬಸವನ ಬಾಗೇವಾಡಿ	52.39	45.96	44.85	54.16	43.27	41.94
	38	ಅತ್ಯಂತ ಹಿಂದುಳಿದ	ಇಂಡಿ	57.46	50.41	49.19	59.41	47.45	46.00
	39	ಅತ್ಯಂತ ಹಿಂದುಳಿದ	ಸಿಂದಗಿ	60.84	53.37	52.08	62.90	50.25	48.71
	40	ಹಿಂದುಳಿದ	ವಿಜಯಪುರ	13.52	11.86	11.57	13.98	11.17	10.82
ಬಾಗಲಕೋಟ್	41	ಅತ್ಯಂತ ಹಿಂದುಳಿದ	ಬಿಳಿಗಿ	38.87	34.10	33.27	40.19	32.10	31.12
	42	ಅತೀ ಹಿಂದುಳಿದ	ಹುನಗುಂದ	25.35	22.24	21.70	26.21	20.94	20.29
	43	ಅತೀ ಹಿಂದುಳಿದ	ಬಾದಮಿ	30.42	26.69	26.04	31.45	25.12	24.35
ಧಾರವಾಡ	44	ಅತೀ ಹಿಂದುಳಿದ	ಕಲ್ ಘಟಗಿ	27.04	23.72	23.15	27.96	22.33	21.65
	45	ಹಿಂದುಳಿದ	ನವಲಗುಂದ	1.69	1.48	1.45	1.75	1.40	1.35
	46	ಹಿಂದುಳಿದ	ಕುಂದಗೋಳ	8.45	7.41	7.23	8.74	6.98	6.76
ಗದಗ	47	ಅತೀ ಹಿಂದುಳಿದ	ಮುಂಡರಗಿ	20.28	17.79	17.36	20.97	16.75	16.24
	48	ಹಿಂದುಳಿದ	ರೋಣ	13.52	11.86	11.57	13.98	11.17	10.82
	49	ಹಿಂದುಳಿದ	ಶಿರಹಟ್ಟಿ	18.59	16.31	15.91	19.22	15.35	14.88
ಹಾವೇರಿ	50	ಅತೀ ಹಿಂದುಳಿದ	ಸವಣೂರು	21.97	19.27	18.81	22.71	18.14	17.59
	51	ಅತೀ ಹಿಂದುಳಿದ	ಶಿಗ್ಗಾಂವ್	27.04	23.72	23.15	27.96	22.33	21.65
	52	ಅತೀ ಹಿಂದುಳಿದ	ಹಿರೇಕೆರೂರು	20.28	17.79	17.36	20.97	16.75	16.24
	53	ಹಿಂದುಳಿದ	ಹಾವೇರಿ	1.69	1.48	1.45	1.75	1.40	1.35
	54	ಹಿಂದುಳಿದ	ಬ್ಯಾಡಗಿ	5.07	4.45	4.34	5.24	4.19	4.06
	55	ಹಿಂದುಳಿದ	ಹಾನಗಲ್	13.52	11.86	11.57	13.98	11.17	10.82
ಉತ್ತರ ಕನ್ನಡ	56	ಅತೀ ಹಿಂದುಳಿದ	ಸೂಪ (ಜೋಯಿಡ)	21.97	19.27	18.81	22.71	18.14	17.59
	57	ಅತೀ ಹಿಂದುಳಿದ	ಭಟ್ಕಳ	30.42	26.69	26.04	31.45	25.12	24.35
	58	ಹಿಂದುಳಿದ	ಅಂಕೋಲಾ	3.38	2.97	2.89	3.49	2.79	2.71
	59	ಹಿಂದುಳಿದ	ಸಿದ್ದಾಪುರ	13.52	11.86	11.57	13.98	11.17	10.82
ರಾಮನಗರ	60	ಅತ್ಯಂತ ಹಿಂದುಳಿದ	ಕನಕಪುರ	44.90	39.39	38.43	46.42	37.08	35.95
	61	ಅತ್ಯಂತ ಹಿಂದುಳಿದ	ಮಾಗಡಿ	36.26	31.81	31.04	37.49	29.95	29.03
	62	ಹಿಂದುಳಿದ	ಚನ್ನಪಟ್ಟಣ	8.63	7.57	7.39	8.93	7.13	6.91
ಬೆಂಗಳೂರು ಗ್ರಾಮಾಂತರ	63	ಹಿಂದುಳಿದ	ಹೊಸಕೋಟೆ	5.18	4.54	4.43	5.36	4.28	4.15
ಬೆಂಗಳುರು ನಗರ	64	ಹಿಂದುಳಿದ	ಅನೇಕಲ್	17.27	15.15	14.78	17.85	14.26	13.83
ಚಿತ್ರದುರ್ಗ	65	ಅತ್ಯಂತ ಹಿಂದುಳಿದ	ಹೊಸದುರ್ಗ	37.99	33.33	32.52	39.28	31.38	30.42
	66	ಅತೀ ಹಿಂದುಳಿದ	ಹಿರಿಯೂರು	22.45	19.69	19.22	23.21	18.54	17.97
	67	ಅತೀ ಹಿಂದುಳಿದ	ಮೊಳಕ್ಕಾಲ್ಮೂರು	27.63	24.24	23.65	28.57	22.82	22.12
	68	ಅತೀ ಹಿಂದುಳಿದ	ಹೊಳಲ್ಕೆರೆ	27.63	24.24	23.65	28.57	22.82	22.12
	69	ಅತೀ ಹಿಂದುಳಿದ	ಚಳ್ಳಕೆರೆ	32.81	28.78	28.09	33.92	27.10	26.27
ದಾವಣಗೆರೆ	70	ಅತ್ಯಂತ ಹಿಂದುಳಿದ	ಚನ್ನಗಿರಿ	37.99	33.33	32.52	39.28	31.38	30.42
	72	ಅತೀ ಹಿಂದುಳಿದ	ಹೊನ್ನಾಳಿ	24.18	21.21	20.70	24.99	19.97	19.36
	73	ಅತೀ ಹಿಂದುಳಿದ	ಜಗಳೂರು	34.54	30.30	29.56	35.71	28.52	27.65

ಜಿಲ್ಲೆಗಳು	ಕ್ರ. ಸಂ.	ತಾಲ್ಲೂಕು ವರ್ಗ	ತಾಲ್ಲೂಕು	2018–19			2019–20		
				ನಿಗದಿ	ಬಿಡುಗಡೆ	ವೆಚ್ಚ	ನಿಗದಿ	ಬಿಡುಗಡೆ	ವೆಚ್ಚ
ಕೋಲಾರ	74	ಅತೀ ಹಿಂದುಳಿದ	ಮುಳಬಾಗಿಲು	20.72	18.18	17.74	21.42	17.11	16.59
	75	ಹಿಂದುಳಿದ	ಶ್ರೀನಿವಾಸಪುರ	3.45	3.03	2.96	3.57	2.85	2.77
	76	ಹಿಂದುಳಿದ	ಮಾಲೂರು	12.09	10.60	10.35	12.50	9.98	9.68
	77	ಹಿಂದುಳಿದ	ಬಂಗಾರಪೇಟೆ	6.91	6.06	5.91	7.14	5.70	5.53
ಚಿಕ್ಕಬಳ್ಳಾಪುರ	78	ಅತ್ಯಂತ ಹಿಂದುಳಿದ	ಬಾಗೇಪಲ್ಲಿ	41.44	36.36	35.48	42.85	34.23	33.18
	79	ಅತೀ ಹಿಂದುಳಿದ	ಗುಡಿಬಂಡೆ	27.63	24.24	23.65	28.57	22.82	22.12
	80	ಅತೀ ಹಿಂದುಳಿದ	ಗೌರಿಬಿದನೂರು	29.36	25.75	25.13	30.35	24.24	23.50
	81	ಹಿಂದುಳಿದ	ಚಿಂತಾಮಣಿ	5.18	4.54	4.43	5.36	4.28	4.15
	82	ಹಿಂದುಳಿದ	ಸಿಡ್ಲಘಟ್ಟ	15.54	13.63	13.30	16.07	12.84	12.44
ಶಿವಮೊಗ್ಗ	83	ಅತೀ ಹಿಂದುಳಿದ	ಸೊರಬ	31.08	27.27	26.61	32.14	25.67	24.89
	84	ಹಿಂದುಳಿದ	ಶಿಕಾರಿಪುರ	13.81	12.12	11.83	14.28	11.41	11.06
ತುಮಕೂರು	85	ಅತ್ಯಂತ ಹಿಂದುಳಿದ	ಕುಣಿಗಲ್	36.26	31.81	31.04	37.49	29.95	29.03
	86	ಅತ್ಯಂತ ಹಿಂದುಳಿದ	ಮಧುಗಿರಿ	44.90	39.39	38.43	46.42	37.08	35.95
	87	ಅತ್ಯಂತ ಹಿಂದುಳಿದ	ಗುಬ್ಬಿ	46.62	40.90	39.91	48.20	38.51	37.33
	88	ಅತ್ಯಂತ ಹಿಂದುಳಿದ	ಸಿರಾ	46.62	40.90	39.91	48.20	38.51	37.33
	89	ಅತ್ಯಂತ ಹಿಂದುಳಿದ	ಪಾವಗಡ	48.35	42.42	41.39	49.99	39.93	38.71
	90	ಅತೀ ಹಿಂದುಳಿದ	ತುರುವೇಕೆರೆ	24.18	21.21	20.70	24.99	19.97	19.36
	91	ಅತೀ ಹಿಂದುಳಿದ	ಕೊರಟಗೆರೆ	29.36	25.75	25.13	30.35	24.24	23.50
	92	ಅತೀ ಹಿಂದುಳಿದ	ಚಿಕ್ಕನಾಯಕನಹಳ್ಳಿ	29.36	25.75	25.13	30.35	24.24	23.50
ಚಿಕ್ಕಮಗಳೂರು	93	ಅತೀ ಹಿಂದುಳಿದ	ಕಡೂರು	35.95	31.54	30.77	37.17	29.69	28.78
	94	ಹಿಂದುಳಿದ	ತರೀಕೆರೆ	20.81	18.26	17.82	21.52	17.19	16.66
ಹಾಸನ	95	ಅತೀ ಹಿಂದುಳಿದ	ಅರಕಲಗೂಡು	30.27	26.56	25.91	31.30	25.00	24.24
	96	ಹಿಂದುಳಿದ	ಹೊಳೆನರಸೀಪುರ	5.68	4.98	4.86	5.87	4.69	4.54
	97	ಹಿಂದುಳಿದ	ಬೇಲೂರು	11.35	9.96	9.72	11.74	9.38	9.09
	98	ಹಿಂದುಳಿದ	ಚೆನ್ನರಾಯಪಟ್ಟಣ	15.14	13.28	12.96	15.65	12.50	12.12
	99	ಹಿಂದುಳಿದ	ಅರಸೀಕೆರೆ	17.03	14.94	14.58	17.61	14.06	13.63
ಮಂಡ್ಯ	100	ಅತೀ ಹಿಂದುಳಿದ	ಮಳವಳ್ಳಿ	30.27	26.56	25.91	31.30	25.00	24.24
	101	ಅತೀ ಹಿಂದುಳಿದ	ನಾಗಮಂಗಲ	32.16	28.22	27.53	33.25	26.56	25.75
	102	ಅತೀ ಹಿಂದುಳಿದ	ಕೃಷ್ಣರಾಜಪೇಟೆ	37.84	33.20	32.39	39.12	31.25	30.29
	103	ಹಿಂದುಳಿದ	ಶ್ರೀರಂಗಪಟ್ಟಣ	3.78	3.32	3.24	3.91	3.13	3.03
	104	ಹಿಂದುಳಿದ	ಮದ್ದೂರು	9.46	8.30	8.10	9.78	7.81	7.57
	105	ಹಿಂದುಳಿದ	ಪಾಂಡವಪುರ	11.35	9.96	9.72	11.74	9.38	9.09
ಮೈಸೂರು	106	ಅತ್ಯಂತ ಹಿಂದುಳಿದ	ಹೆಚ್.ಡಿ.ಕೋಟೆ	52.98	46.48	45.35	54.77	43.75	42.41
	107	ಅತೀ ಹಿಂದುಳಿದ	ಹುಣಸೂರು	22.70	19.92	19.44	23.47	18.75	18.18
	108	ಅತೀ ಹಿಂದುಳಿದ	ಟಿ.ನರಸೀಪುರ	24.60	21.58	21.06	25.43	20.31	19.69
	109	ಅತೀ ಹಿಂದುಳಿದ	ನಂಜನಗೂಡು	24.60	21.58	21.06	25.43	20.31	19.69
	110	ಹಿಂದುಳಿದ	ಪಿರಿಯಾಪಟ್ಟಣ	5.68	4.98	4.86	5.87	4.69	4.54
	111	ಹಿಂದುಳಿದ	ಕೆ.ಆರ್.ನಗರ	15.14	13.28	12.96	15.65	12.50	12.12
ಚಾಮರಾಜನಗರ	112	ಅತ್ಯಂತ ಹಿಂದುಳಿದ	ಚಾಮರಾಜನಗರ	41.62	36.52	35.63	43.03	34.38	33.32
	113	ಅತೀ ಹಿಂದುಳಿದ	ಗುಂಡ್ಲುಪೇಟೆ	35.95	31.54	30.77	37.17	29.69	28.78

ಜಿಲ್ಲೆಗಳು	ಕ್ರ ಸಂ.	ತಾಲ್ಲೂಕು ವರ್ಗ	ತಾಲ್ಲೂಕು	2018–19			2019–20		
				ನಿಗದಿ	ಬಿಡುಗಡೆ	ವೆಚ್ಚ	ನಿಗದಿ	ಬಿಡುಗಡೆ	ವೆಚ್ಚ
	114	ಅತೀ ಹಿಂದುಳಿದ	ಕೊಳ್ಳೇಗಾಲ	37.84	33.20	32.39	39.12	31.25	30.29
				3481.25	**3054.09**	**2980.12**	**3599.25**	**2875.17**	**2787.13**

(ಪಿಡಿ 16 ಎಸ್‌ಡಿಪಿ 2021)

2020–21ನೇ ಸಾಲಿನಲ್ಲಿ ನಂಜುಂಡಪ್ಪ ಯೋಜನೆಯನ್ವಯ ವಿವಿಧ ಇಲಾಖೆಗಳಡಿ ಮಂಜೂರಾದ ಅನುದಾನ, ಬಿಡುಗಡೆಯಾದ ಹಾಗೂ ಖರ್ಚಾಗಿರುವ ಅನುದಾನದ ವಿವರವು ಏಪ್ರಿಲ್–2021ರ ಮಾಹೆಯ ಮುಕ್ತಾಯ ಹಂತದಲ್ಲಿ ಇಲಾಖೆಯವರು ಸಲ್ಲಿಸುವರು.

(ಡಿ.ಚಂದ್ರಶೇಖರಯ್ಯ)
ನಿರ್ದೇಶಕರು
ಯೋಜನೆ, ಕಾರ್ಯಕ್ರಮ ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ.